ಸದರೀ ದರಖಾಸ್ತುದಾರರಾದ ನರಸುಪ್ಪ, ಬೆಟ್ಟಪ್ಪ, ವೈನರ್ ಗಾರ್ಡಿಯರ್ ಮತ್ತು ತಾಯಿ ಪುಟ್ಟಮ್ಮ. ಇವರ ಅರ್ಜೀಯನ್ನು 1884ನೇ ಇಸವಿ ಜೂನ್ ತಿಂಗಳು ತಾರೀಖು ೨ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಒಟ್ಟಾಚಾರೀ ಆಸ್ತಿಗೆ ಹಕ್ಕುದಾರರಾದ ವಿರೋಧ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಮಾರ್ಚೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಂಹಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಇಸ್ತಿಹಾರ್ ನಾಮಾ.

ತಾರೀಖು 3ನೇ ಮಾರ್ಚೀ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಖೆಡ್ಡಾಯಾನೆ ಆನೆಗಳನ್ನ ಹಿಡಿಯತಕ್ಕ ಕೆಲಸ ನಡಿಸಲ್ಪಡುವದರಿಂದ ಸಾಲ್ ವಜಕೂರ್ ಮೇ 1ನೇ ಮಕ್ತಂ ಲಾಗಾಯತು ಆಗಸ್ಟು 31ನೇ ಮಕ್ತಂವರೆಗೆ, ಚಾಮರಾಜನಗರಕ್ಕೂ, ಹುಣಸೂರಿಗೂ, ಮಧ್ಯದಲ್ಲಿರುವ ಸರ್ಕಾರದ ರಸ್ತೆಗೆ ಪೂರ್ವ ದಿಕ್ಕಿನಲ್ಲಿರುವ ಯಾವ ಡಿಸ್ಟ್ರಿಕ್ಟು ಜಂಗ್ಲಿ ಯಲ್ಲಾಗಲಿ ಷಿಕಾರಿ ಆಡುವ ಬಗ್ಗೆ ಅಪ್ಪಣೆ ಕೊಡಲ್ಪಡುವದಿಲ್ಲವೆಂತ.

ಎ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ತಾರೀಖು 15ನೇ ಮಾರ್ಚೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೋಟ್ಲು ನರಪುರ ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಖ್ತಾರೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು-ಲಾಗಾಯಿತು ವಂದು ತಿಂಗಳೊಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳೀಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಕಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
4ನೇ ಬುಕ್ಕು ನಂಬರ್ 9 ——— 1881—82	ಚಾಮರಾಜನಗರದ ತಾಲ್ಲೂಕು ಆಲೂರು ಗ್ರಾಮದ ಮುದ್ದುಕೃಷ್ಣಯ್ಯಂಗಾರು ಶ್ರೀವೈಷ್ಣವಜಾತಿ ಕೃಷಿಜೀವನ	ಚಾಮರಾಜನಗರ ತಾಲ್ಲೂಕು ಆಲೂರು ಕುಳು ವೆಂಗಟಯ್ಯನವರ ಮಗ ಕೃಷ್ಣಯ್ಯಂಗಾರ್ ಶ್ರೀವೈಷ್ಣವ ಜಾತಿ ಕೃಷಿ ಜೀವನ	3—2—82	3—2—82	400 ರೂಪಾಯಿನ ಭೂಸ್ಥಿತಿ ಆಧಾರ ಪತ್ರ.

ತಾರೀಖು 17ನೇ ಮಾರ್ಚೀ 1884.

ಯಳಂದೂರು ತಾಲ್ಲೂಕು ಆಫ್ಟಿಂಗ್ ಅಮಲ್ದಾರ್ ಮತ್ತು ನೂರನೇ ಕ್ಲಾಸ್ ಮಾಜಿಸ್ಟ್ರೇಟರಾದ ಗೋವಿಂದಪ್ಪನವರಿಗೆ, 1882ನೇ ಇಸವಿ Xನೇ ನಂಬರ್ ಆಕ್ಟಿನ 23ನೇ ಸೆಕ್ಷನ್ (ಬಿ) ಕ್ಲಾಜ್ ಅನುಸರಿಸಿ ಇದರಿಂದ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ:—

(1) ಲಾಷ್ ವಿಚಾರಣೆ ಮಾಡಲಿಕ್ಕೆ ಅಧಿಕಾರ, (135ನೇ ಸೆಕ್ಷನ್.)

(2) ದರ್ಯಾಫ್ತ್ ಮಾಡಲಿಕ್ಕೆ ಅವರಿಗೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕರೀರುಗಳ ಬಾಬತು ಫಿರ್ಯಾದುಗಳನ್ನು ಹಿಡಿಯುವದಕ್ಕೆ ಅಧಿಕಾರ, (141ನೇ ಸೆಕ್ಷನ್.)

(3) ಅತಂಕ ಮುಂತಾದ್ದನ್ನು ಅಡ್ಡೀಮಾಡುವದಕ್ಕೆ ಹುಕ್ಕುಂ ಮಾಡುವ ಅಧಿಕಾರ (518ನೇ ಸೆಕ್ಷನ್.)

(4) ಹೇಸಿಕೆಗಳು ಬಾರ್‌ಬಾರ್ ನಡಿಯದಂತೆ ಅಡ್ಡೀಮಾಡುವದಕ್ಕೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (519ನೇ ಸೆಕ್ಷನ್.)

ತಾರೀಖು 27ನೇ ಮಾರ್ಚೀ 1884.

ಮಂಡ್ಯದ ಆಕ್ಟಿಂಗ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಶಂಕಟರಾಯರಿಗೆ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 23ನೇ ಸೆಕ್ಷನ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ:—

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ, (ಸೆಕ್ಷನ್ 135)

2. ಅವರಿಗೆ ದರ್ಯಾಫ್ತ್ ಮಾಡುವಕ್ಕೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕರೀರುಗಳ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವ ಬಗ್ಯೆ ಅಧಿಕಾರ (ಸೆಕ್ಷನ್ 141.)

(3) ನಿರೋಧವನ್ನು ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ, (ಸೆಕ್ಷನ್ 518.)

(4) ಹೇಸಿಗೆಯು ಬಾರ್ ಬಾರ್ ನಡಿಯದಂತೆ ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ, (ಸೆಕ್ಷನ್ 519.)

ಅಬ್ದುಲ್‌ಖಾದರ್, ಕೆ: ಬಿ,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ನೋಟೀಸ್.

ಕೋಲಾರ ದೊಡ್ಡಪ್ಯಾಟೆ ಸಾಹುಕಾರ್ ಬ್ಯಾಂಕ್ ಲಿಮಿಟೆಡ್‌ನಿಂದ.

ತಾರೀಖು 26ನೇ ಮಾರ್ಚೀ 1884.

ಸರ್ವಜನಗಳಿಗೂ ತಿಳಿಯಪಡಿಸುವದೇನಂದರೆ, ಬ್ಯಾಂಕ್‌ಮುಕಾಮಿನ ಪತ್ರಗಳ್ನು ಡಿಕರೀಗಳು ಫರ್‌ನೀಚರು ವಗ್ಯೈರೆ ಸಾಮಾನುಗಳು ಇವುಗಳನ್ನ ಡಿಸ್ಟ್ರಿಕ್ಟು ಜಡ್ಜ್ ಕೊರ್ಟು ಆರ್ಡರ್ ಮೇಲೆ 1884ನೇ ಇಸವಿ ಏಪ್ರೆಲ್ 17ನೇ ತಾರೀಖು ಲಾಗಾಯಿತು 21ನೇ ತಾರೀಖಿನ ವರಿಗೆ ದಿನವಹಿ ಮದ್ಯಾಹ್ನ 12 ಘಂಟೆ ಲಾಗಾಯಿತು ಸಾಯಿಂಕಾಲ 5 ಘಂಟೆವರಿಗೆ ಬ್ಯಾಂಕ್ ಹೌಸಿನಬಳಿ ಲಿಕ್ವಿಡೇಟರುಗಳಿಂದ ಹರಾಜು ಮಾಡಲ್ಪಡುವದು.

ಷರತ್ತು—ನಗದು ಹಣ.

ಇತರ ತಪಶೀಲ್‌ಗಳನ್ನು ಲಿಕ್ವಿಡೇಟರುಗಳಿಗೆ ಅಪ್ಲಿಕೇಷನ್ ಮೂಲಕ ತಿಳದುಕೊಳ್ಳಬಹುದು.

ಕೃಷ್ಣರಾವ್, ಲಿಕ್ವಿಡೇಟರ್.
ಶೇಷಾರಾಮಪ್ಪ, ಲಿಕ್ವಿಡೇಟರ್.

ತಪ್ಪು ಗುರಸ್ತು.

ಸ॥ 1884ನೇ ಇಸವಿ ಮಾರ್ಚೀ 22ನೇ ಮತ್ತು 12ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 103ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನ ಅದೇ ಮಾಹೆ 9ನೇ ಮತ್ತು ಒಳ್ಳೆ ಇಸ್ತಿಹಾರ್‌ನಾಮೆಯ 2ನೇ ಪಚ್ತಿಯಲ್ಲಿ "ಶಿವಿಲ್ ಪ್ರೊಸೀಜ್ಯೂರ್ ಕೋಡಿನ" ಯಂಬಮಾತುಗಳಿಗೆ ಬದಲಾಗಿ "ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ" ಯಂಬದಾಗಿ ಪೋದಿಕೊಳ್ಳತಕ್ಕದ್ದು.